ಈ) ಪರಿಸ್ಥಿತಿಯ ಗಂಭೀರತೆಯನ್ನರಿತು, ಈಗಾಗಲೇ ಕುಡಿಯುವ ನೀರಿನ ಹಾಗೂ ಮೇವಿನ ಅಭಾವ ಇರುವ ಕಡೆಗಳಲ್ಲಿ, ಕುಡಿಯುವ ನೀರು ಹಾಗೂ ಮೇವು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಜೈಆರ್‌ವೈ ಇಎಎಸ್, ಮತ್ತು ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಜನಗಳಿಗೆ ಉದ್ಯೋಗವನ್ನು ಒದಗಿಸಲಾಗುತ್ತಿದೆ.

ಹುಬ್ಬಳ್ಳಿಯ ಭವಾನಿಶಂಕರ ದೇವಸ್ಥಾನದ ಜೀರ್ಣೋದ್ಧಾರ

2998 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದ ಹಳೇ ಹುಬ್ಬಳ್ಳಿಯ ಪ್ರಾಚೀನ ಭವಾನಿಶಂಕರ ದೇವಸ್ಥಾನವು ಅತ್ಯಂತ ಸುಂದರ ಪ್ರಾಚೀನ ದೇವಾಲಯವಾಗಿದ್ದು, ಶಿಲ್ಪ ಕಲೆಯ ಅತ್ಯಮೂಲ್ಯ ಸ್ಮಾರಕವಾಗಬೇಕಾಗಿದ್ದು, ಈ ದೇವಾಲಯ ಯಾವುದೇ ಸಂರಕ್ಷಣೆ ಇಲ್ಲದೆ ಅತ್ಯಂತ ಜೀರ್ಣಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?*

ಆ) *ಬಂದಿದ್ದಲ್ಲಿ, ಈ ಭವಾನಿಶಂಕರ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಅದರ ಸಂರಕ್ಷಣೆ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಇಲ್ಲ, ಈ ದೇವಸ್ಥಾನವು ಮುಂಬೈ ಸಾರ್ವಜನಿಕ ಜಿಮ್ಮೆಗಳ ಕಾಯ್ದೆ 1950ರಡಿಯಲ್ಲಿ ನೋಂದಾಯಿಸಲಾಗಿದೆ ಸದರಿ ಸಂಸ್ಥೆಯ ಆಡಳಿತವು ವಂಶಪಾರಂಪರ್ಯ ಟ್ರಸ್ಟಿಗಳ ವಶದಲ್ಲಿದೆ. ಸಂಸ್ಥೆಯ ದುರಸ್ಥಿಗಾಗಿ ಟ್ರಸ್ಟಿಗಳಿಂದ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿರುವ ಸಹಕಾರಿ ನೂಲಿನ ಗಿರಣಿ

3000 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿರುವ ಸಹಾಕರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?*

ಆ) *ಅವುಗಳಲ್ಲಿ ಲಾಭದಲ್ಲಿರುವ, ನಷ್ಟದಲ್ಲಿರುವ ಗಿರಣಿಗಳು ಎಷ್ಟು?*

ಇ) *ಯಾವ ಯಾವ ಗಿರಣಿಗಳು ಎಷ್ಟೆಷ್ಟು ನಷ್ಟ ಅನುಭವಿಸುತ್ತವೆ. ಈ ಗಿರಣಿಗಳು ನಷ್ಟ ಅನುಭವಿಸಲು ಕಾರಣಗಳೇನು, ಅದಕ್ಕೆ ಯಾರು ಜವಾಬ್ದಾರರು?*